329 ಶ್ರೀ ಖಾದರ್.ಯು.ಟಿ(ಮಂಗಳೂರು)
ಶ್ರೀ ಕರುಣಾಕರ ರೆಡ್ಡಿ (ಮಾನ್ಯ ಕಂದಾಯ ಸಚಿವರು)

1) ರಾಜ್ಯದಲ್ಲಿ 2008–09ನೇ ಸಾಲಿನಿಂದ ಇಲ್ಲಿಯವರೆಗೆ ಕಡಲಕೊರೆತದಿಂದ ಆಗಿರುವ ಪ್ರಾಣಹಾನಿ ಹಾಗೂ ಅಸ್ತಿ ಪಾಸ್ತಿಗಳ ನಷ್ಟ ಎಷ್ಟು?

ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಕಡಲ ಕೊರೆತದಿಂದ ಪ್ರಾಣ ಹಾನಿಯಾಗಿರುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡಲ ಕೊರೆತ ಉಂಟಾಗಿದ್ದು 38 ಮನೆಗಳು ಹಾಗೂ ಒಂದು ಮಸೀದಿ/ಮುದ್ರಸಕ್ಕೆ ಭಾಗಶ: ಹಾನಿಯಾಗಿರುತ್ತದೆ. ಹಾನಿಯ ಅಂದಾಜು ನಷ್ಟ 12.42 ಲಕ್ಷ ಆಗಿರುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಡಲ ಕೊರೆತ ಉಂಟಾಗಿದ್ದು ಅಂಕೋಲಾ ತಾಲ್ಲೂಕಿನ ಹಾರವಾಡದಲ್ಲಿ 2 ತೆಂಗಿನಮರ ಹಾಗೂ ಶೌಚಾಲಯ ಕುಸಿದು ಹಾನಿಯಾಗಿದೆ. ಅಲ್ಲದೆ ಹೊನ್ನಾವರ ತಾಲ್ಲೂಕಿನ ಪಾವಿನಕುರ್ವಾದಲ್ಲಿ ಸಹ ಕೃಷಿ ಜಮೀನಿಗೆ ನೀರು ನುಗ್ಗಿ ಹಾನಿ ಸಂಭವಿಸಿರುತ್ತದೆ.

ಉಡುಪಿ ಜಿಲ್ಲೆಯಲ್ಲಿ ಕಡಲು ಕೊರೆತದಿಂದಾಗಿ ಸಾರ್ವಜನಿಕ ಆಸ್ತಿ ಪಾಸ್ತಿಗೆ ಹಾನಿಯಾಗಿಲ್ಲ.

2) ಹಾಗಿದ್ದಲ್ಲಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.

3) ಬಂದಿದ್ದಲ್ಲಿ ಸರಕಾರ ಕೈಕೊಂಡ ಕ್ರಮವೇನು?

2008–09ನೇ ಸಾಲಿನಲ್ಲಿ ದಕ್ಷಿನ ಕನ್ನಡ ಜಿಲ್ಲೆಯ ಉಳ್ಳಾಲದಲ್ಲಿ ಸಂಭವಿಸಿದ ಸಮುದ್ರ ಕೊರೆತ ತಡೆಯಲು ಉಳ್ಳಾಲದ ಕೋಟೆಪುರ ಮುಕ್ಕಚೇರಿ, ಸುಭಾಷ್ ನಗರ ಮತ್ತು ಮೊಗವೀರಪಟ್ಟಣದಲ್ಲಿ ರೂ.104.50 ಲಕ್ಷಗಳ ಒಟ್ಟು 401.00 ಮೀಟರ್ ತುರ್ತು ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ರೂ. 25.00 ಲಕ್ಷ ಮೊತ್ತ 7 ಕಾಮಗಾರಿಗಳನ್ನು 2008–09ನೇ ಸಾಲಿನ ಪ್ರಾಕೃತಿಕ ವಿಕೋಪ ಪರಿಹಾರ ನಿಧಿಯಿಂದ ಭರಿಸಿಕೊಂಡು ಕಾಮಗಾರಿಗಳ ಅಂದಾಜು ಪಟ್ಟಿಗೆ ಮಂಜೂರಾತಿ ನೀಡಿ ತುರ್ತು ಕಾಮಗಾರಿಗಳನ್ನು ಕಾರ್ಯನಿರ್ವಾಹಕ ಇಂಜಿನಿಯರರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ ಇವರ ಮೂಲಕ ಅನುಷ್ಠಾನಕ್ಕೆ ನೀಡಿ ಸುಮಾರು 1071 ಮಿ. ನಷ್ಟು ಉದ್ದದ ಸಮುದ್ರ ತೀರವನ್ನು ಸಂರಕ್ಷಿಸಲಾಗಿದೆ.